**ಅಸಲು ದಾವ ಸಂಖ್ಯೆ: 479/2021**

**ಪಿ.ಡಬ್ಲೂ -1**

**ದಿಃ 16-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು 2 ರಿಂದ 4ನೇ ಪ್ರತಿವಾದಿ ಪರ ವಕೀಲರಾದ ಶ್ರೀ MDP ರವರಿಂದಃ-**

1. ಈ ದಾವೆ ಹೂಡಲು ಮಾಹಿತಿಯನ್ನು ನನ್ನ ವಕೀಲರಿಗೆ ನಾನೇ ನೀಡಿರುತ್ತೇನೆ. ಸರ್ವೆ ನಂಬರ 69/2 ರಲ್ಲಿ 36 ಗುಂಟೆ 14 ಆಣಾ ಜಾಗ ಇರುತ್ತದೆ. ಸದರಿ ಸರ್ವೆ ನಂಬರ 69/2 ರಲ್ಲಿ ಒಟ್ಟು 3-ಎಕರೆ 37-ಗುಂಟೆ 8-ಆಣಾ ಜಾಗ ಇರುತ್ತದೆ ಎಂದರೆ ಸರಿ. 3-ಎಕರೆ 37-ಗುಂಟೆ 8-ಆಣಾ ಜಾಗದಲ್ಲಿ ನನಗೆ ಹಾಗೂ 1 ರಿಂದ 4ನೇ ಪ್ರತಿವಾದಿಯರಿಗೆ ಎಷ್ಟು ವಿಸ್ತೀರ್ಣದ ಜಾಗ ಹಿಸ್ಸೆಯಾಗಿ ಬರಬೇಕು ಎಂದರೆ ಸಾಕ್ಷಿ ಸದರಿ ವಿಸ್ತೀರ್ಣದಲ್ಲಿ 36-ಗುಂಟೆ 14-ಆಣಾ ಜಾಗದಲ್ಲಿ ತನಗೆ ಹಾಗೂ 1 ರಿಂದ 4 ನೇ ಪ್ರತಿವಾದಿಯರಿಗೆ ಪಾಲು ಬರಬೇಕು ಎಂದು ನುಡಿಯುತ್ತಾರೆ. ಒಟ್ಟು 3-ಎಕರೆ 37-ಗುಂಟೆ 8-ಆಣಾ ಕ್ಷೇತ್ರದಲ್ಲಿ ನಮಗೆ 36-ಗುಂಟೆ 14-ಆಣಾ ಜಾಗದಲ್ಲಿ ಪಾಲು ಆಗಬೇಕು ಎಂದು ಯಾವ ಆಧಾರದ ಮೇಲೆ ಹೇಳುತ್ತೀರಾ ಎಂದರೆ ಸಾಕ್ಷಿ ತನ್ನ ಮಾವ ಬಾಬು ರವರಿಗೆ ಸದರಿ ಒಟ್ಟು ಕ್ಷೇತ್ರದಲ್ಲಿ 36-ಗುಂಟೆ 14-ಆಣಾ ಸೇರಿಬೇಕಾದ ಕಾರಣ ಅದರಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಪಾಲು ಆಗಬೇಕು ಎಂದು ನುಡಿಯುತ್ತಾರೆ. ಆ ರೀತಿ 36-ಗುಂಟೆ 14-ಆಣಾ ಜಾಗ ನನ್ನ ಮಾವ ಬಾಬು ರವರ ಹಿಸ್ಸೆಗೆ ಬಂದಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯದ ಮುಂದೆ ದಾಖಲೆ ಹಾಜರಪಡಿಸಿರುತ್ತೇನೆ. ಒಟ್ಟು 3-ಎಕರೆ 37-ಗುಂಟೆ 8-ಆಣಾ ಜಮೀನಿನಲ್ಲಿ ಬೇರೆ ಮಾಲೀಕರದ್ದು ಜಾಗ ಇರುತ್ತದೆ ಎಂದರೆ ಸರಿ. ಸದರಿ ಬೇರೆ ಮಾಲೀಕರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ 69/2 ರ 36-ಗುಂಟೆ 14-ಆಣಾ ಜಾಗದ ಚೆಕ್ಕುಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂಬರ

69/2 ರಲ್ಲಿ 36-ಗುಂಟೆ 14-ಆಣಾ ಜಾಗವು ನನ್ನ ಮಾವ ಬಾಬು ರವರಿಗೆ ವಾಟ್ನಿ ಪ್ರಕಾರ ಬಂದಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು 2 ರಿಂದ 4ನೇ ಪ್ರತಿವಾದಿಯರು ಅವರ ಸ್ವಂತ ದುಡಿಮೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕೋಂಡಸಕೊಪ್ಪ ಗ್ರಾಮದಲ್ಲಿ 1 ಎಕರೆ ಜಮೀನಿಗೆ ಎಷ್ಟು ಮೌಲ್ಯ ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಈ ದಾವೆಯಲ್ಲಿ ಸರ್ವೆ ನಂಬರ 69/2 ಹಾಗೂ 19/2 ಸೇರಿ 12,50,000/- ಮೌಲ್ಯವಾಗುತ್ತದೆ ಎಂದು ವಾದಪತ್ರದಲ್ಲಿ ಬರೆದಿರುತ್ತೇನೆ ಎಂದರೆ ಸರಿ. ಕೊಂಡಸಕೊಪ್ಪ ಗ್ರಾಮದಲ್ಲಿ 1 ಎಕರೆಗೆ 40 ರಿಂದ 50 ಲಕ್ಷ ಮೌಲ್ಯ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ 69/2 ಹಾಗೂ 19/2 ರ ಜಮೀನುಗಳನ್ನು 2 ರಿಂದ 4ನೇ ಪ್ರತಿವಾದಿಯರು ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ಅದೇ ಪ್ರಕಾರ ಬಸ್ತವಾಡ ಗ್ರಾಮದಲ್ಲಿರುವ ಸರ್ವೆ ನಂಬರ 19/2 ರ ಜಮೀನು ಇರುವಲ್ಲಿ 1 ಗುಂಟೆಗೆ 15 ರಿಂದ 20 ಲಕ್ಷ ಬೆಲೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಅಲ್ಲಿ 1 ಗುಂಟೆಗೆ ಎಷ್ಟು ಬೆಲೆ ಎಂದರೆ ನನಗೆ ಗೊತ್ತಿಲ್ಲ, 1 ಗುಂಟೆಗೆ 10 ಲಕ್ಷ ಆಗಬಹುದು.

2. ನನ್ನ ಪತಿ ಬಾಹುಬಲಿ ಬಾಬು ಪಾಟೀಲ ರವರು ದಿಃ 28-08-2017 ರಂದು ಮರಣಹೊಂದಿರುತ್ತಾರೆ ಹಾಗೂ ಅವರ ಗೌಂಡಿಮೇಸ್ತ್ರಿ ಆಗಿ ಕೆಲಸ ಮಾಡುತ್ತಿದ್ದರು. ನಾನು ವಾದಪತ್ರದಲ್ಲಿ ನನ್ನ ಪತಿ ವ್ಯಾಪಾರ ಮಾಡುತ್ತಿದ್ದರು ಎಂದು ಬರೆದಿರುತ್ತೇನೆ ಎಂದರೆ ಸಾಕ್ಷಿ ತಾನು ಕಿರಾಣಿ ಅಂಗಡಿಯ ವ್ಯಾಪಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಎಂದರೆ ನನ್ನ ಪತಿಯ ಮರಣದ ಕಾಲಕ್ಕೆ ನಾವುಹಾಗೂ ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿ ವಾಸವಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಪ್ರತ್ಯೇಕವಾಗಿ ವಾಸವಿದ್ದರು ಎಂದು ನುಡಿಯುತ್ತಾರೆ. ನನ್ನ ಪತಿಯ ಮರಣದ ಕಾಲಕ್ಕೆ ನಾವು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುವುದಿಲ್ಲ. ನಾನು ನಡೆಸುತ್ತಿರುವ ಕಿರಾಣಿ ಅಂಗಡಿಗೆ

ಪ್ರತಿವಾದಿಯರು ಸುಮಾರು 20 ಲಕ್ಷದ ಹೂಡಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತನ್ನ ಪತಿ ಹಾಗೂ ತನ್ನ ತವರು ಮನೆಯವರು ಎಂದರೆ ತನ್ನ ತಾಯಿ ಸದರಿ ಹೂಡಿಕೆ ಮಾಡಿರುವುದಾಗಿ ನುಡಿಯುತ್ತಾರೆ. ನನ್ನ ತವರು ಮನೆಯವರು ಅಂಗಡಿ ನಡೆಸಲು ಹಣ ನೀಡಿದ್ದರ ಬಗ್ಗೆ ನನ್ನ ಬಳಿ ಪುರಾವೆ ಇರುವುದಿಲ್ಲ. ನನ್ನ ತವರು ಮನೆಯವರು ಅಂಗಡಿ ನಡೆಸಲು ಹಣ ನೀಡಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ತಾಯಿ ಎಂದರೆ 2 ರಿಂದ 4ನೇ ಪ್ರತಿವಾದಿಯರ ಸಹೋದರಿಯಾಗಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ 5 ಜನ ಮಕ್ಕಳು, ಮೂರು ಜನ ಹೆಣ್ಣುಮಕ್ಕಳು ಹಾಗೂ ಇಬ್ಬರು ಗಂಡುಮಕ್ಕಳು. ನನ್ನ ತಾಯಿಯವರ ಹೆಸರಿನಲ್ಲಿ 4 ಎಕರೆ ಜಮೀನು ಇರುತ್ತದೆ. ವಾರ್ಷಿಕವಾಗಿ ನನ್ನ ತಾಯಿಯ ಜಮೀನಿನಿಂದ ಎಷ್ಟು ಉತ್ಪನ್ನ ಬರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ತಾಯಿಗೆ ಅವರ ಗಂಡನ ತಂದೆಯಿಂದ ಪಿತಾರ್ಜಿತವಾಗಿ ಸದರಿ ಆಸ್ತಿ ಬಂದಿರುತ್ತದೆ. ನನ್ನ ಗಂಡ ತೀರಿಕೊಂಡ ಸಮಯದಲ್ಲಿ ಅವರು ಕಿರಾಣಿ ಅಂಗಡಿ ನಡೆಸುತ್ತಿದ್ದರು ಹಾಗು ಅದರ ನಂತರ ನಾನು ಮುಂದುವರೆಸಿರುತ್ತೇನೆ ಎಂದರೆ ಸಾಕ್ಷಿ ತನ್ನ ಗಂಡ ಬದುಕಿದ್ದಾಗಲೂ ತಾನೇ ಸದರಿ ಅಂಗಡಿ ನಡೆಸುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಪತಿಯ ಆರೋಗ್ಯ ಸರಿಯಿಲ್ಲದಿದ್ದ ಕಾರಣ 2 ರಿಂದ 4ನೇ ಪ್ರತಿವಾದಿಯರು ಸೇರಿಕೊಂಡು ಮನೆಯಲ್ಲಿಯೇ ಅಂಗಡಿಯನ್ನು ನನ್ನ ಪತಿಗೆ ಹಾಕಿಕೊಟ್ಟಿದ್ದರು ಎಂದರೆ ಸರಿಯಲ್ಲ.

4. ಈ ದಾವೆ ಹೂಡುವ ಸಮಯದಲ್ಲಿ ಬಸ್ತವಾಡದಲ್ಲಿ ಇರುವ ಮನೆ ನಂಬರ 495 ಸ್ವತ್ತು ಮಾನಿಕ ಸದೆಪ್ಪ ಅಂಗ್ರೋಳಿ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಸದರಿ ಸ್ವತ್ತು ತನ್ನ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಒಂದು ಮನೆಯನ್ನೂ ಸಹ ದಾವಾ ಸ್ವತ್ತು ಎಂದು ತೋರಿಸಿದ್ದು, ಸದರಿ ಸ್ವತ್ತು ಬಸ್ತವಾಡ ಗ್ರಾಮದ ಜಿಪಿಸಿ ನಂಬರ 819 ಆಗಿರುತ್ತದೆ. ಸದರಿ ಮನೆಯ ಮಾರುಕಟ್ಟೆಯ ಬೆಲೆ ಎಷ್ಟು ಎಂದು ನನಗೆ ಗೊತ್ತಿಲ್ಲ.

ಸದರಿ ಪೂರ್ಣ ಮನೆಯ ಮೌಲ್ಯ ಸುಮಾರು 50 ರಿಂದ 60 ಲಕ್ಷ ಆಗಬಹುದು ಎಂದರೆ ಸರಿ. ಸದರಿ ಮನೆ ಇರುವ ಜಾಗವನ್ನು ನನ್ನ ಪತಿ ಬಾಹುಬಲಿ ಬಾಬು ಪಾಟೀಲ ಹಾಗೂ ಪ್ರತಿವಾದಿಯರು ಸೇರಿಕೊಂಡು ಮೊದಲು ಇದ್ದ ಹಳೆಯ ಮನೆಯನ್ನು ಮಾರಾಟ ಮಾಡಿ ಜಿಪಿಸಿ ನಂಬರ 819 ಇರುವ ಜಾಗವನ್ನು ಖರೀದಿಸಿರುತ್ತಾರೆ. ಸದರಿ ಹಳೆಯ ಜಾಗವನ್ನು ನನ್ನ ಪತಿ ಹಾಗೂ ಪ್ರತಿವಾದಿಯರು ಅದರಲ್ಲಿ ಅವರಿಗೆ ಇದ್ದ ಹಿಸ್ಸೆಯ ಬದಲು ಅವರ ಚಿಕ್ಕಪ್ಪ ದೊಡ್ಡಪ್ಪ ರವರಿಂದ ಹಣವನ್ನು ಪಡೆದು ಜಿಪಿಸಿ ನಂಬರ 819 ರ ಜಾಗವನ್ನು ಖರೀದಿ ಮಾಡಿದ್ದರು. ಸದರಿ ಹಳೆಯ ಮನೆಯ ಸಂಖ್ಯೆ ಹಾಗೂ ಕ್ಷೇತ್ರ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**